## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ : Grid Interactive Hybrid Solar Roof Top Power plants ಅಳವಡಿಕೆಗೆ ಸಂಬಂಧಿಸಿದಂತೆ ಐದು ಅರ್ಹ ಗುತ್ತಿಗೆದಾರ ಸಂಸ್ಥೆಗಳ ಪೈಕಿ ಯಾವುದೇ ಸಂಸ್ಥೆಗೆ ಕಾರ್ಯಾದೇಶ ನೀಡುವ ಬಗ್ಗೆ.

ಓದಲಾಗಿದೆ :

1. ಅಧಿಸೂಚನೆ ಸಂ:RDPR/12/BGS/2020 ದಿನಾಂಕ:18-04-2020
2. ಅಧಿಸೂಚನೆ ಸಂ:RDPR/12/BGS/2020(2nd Stage) ದಿನಾಂಕ:20-07-2020
3. ಸಂ:KPRC/DD-4/BGS/22/2020 ದಿನಾಂಕ:22-10-2020
4. ಸಂ:KPRC/DD-4/BGS/22/2020 ದಿನಾಂಕ:22-12-2020
5. ಸರ್ಕಾರದ ಆದೇಶ ಸಂ: KPRC/DD-4/214/2021 ದಿನಾಂಕ: 07.03.2022
6. ಸರ್ಕಾರದ ಆದೇಶ ಸಂ: KPRC/DD-4/30/2022 ದಿನಾಂಕ: 20.04.2022

**ಪ್ರಸ್ತಾವನೆ:**

ಓದಲಾದ(1) ಮತ್ತು (2)ರಲ್ಲಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಅಧೀನದಲ್ಲಿ ಬರುವ ಇಲಾಖಾ ಕಛೇರಿಗಳು, ಜಿಲ್ಲಾ ಪಂಚಾಯತ್ ಹಾಗೂ ಜಿಲ್ಲಾ ಪಂಚಾಯತ್ ಅಧೀನದಲ್ಲಿ ಬರುವ ಕಛೇರಿಗಳು, ತಾಲ್ಲೂಕು ಪಂಚಾಯತಿ ಮತ್ತು ಗ್ರಾಮ ಪಂಚಾಯತಿಗಳ ಕಟ್ಟಡಗಳಲ್ಲಿ Grid Interactive Hybrid Solar Roof Top Power plants ಗಳನ್ನು ಅಳವಡಿಸಲು ಕೆ.ಟಿ.ಪಿ.ಪಿ ನಿಯಮಗಳನ್ವಯ ಎರಡು ಹಂತಗಳಲ್ಲಿ ಇ-ಟೆಂಡರ್ ಪ್ರಕ್ರಿಯೆಗಳನ್ನು ಪೂರ್ಣಗೊಳಿಸಿ ಟೆಂಡರ್ ನೆಗೋಷಿಯೇಷನ್ ಕಮಿಟಿ ಹಾಗೂ ಟೆಂಡರ್ ಅಂಗೀಕಾರ ಸಮಿತಿಯ ಅನುಮೋದನೆಯನ್ವಯ 05 ಅರ್ಹ ಗುತ್ತಿಗೆದಾರರನ್ನು ಆಯ್ಕೆ ಮಾಡಿ, ಓದಲಾದ(3) ರಂತೆ Letter of Acceptance(LoA) ನೀಡಲಾಗಿದ್ದು, ಓದಲಾದ(4) ರಂತೆ ಕಾರ್ಯಕ್ರಮದ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಮಾರ್ಗಸೂಚಿಗಳನ್ನು ಹೊರಡಿಸಲಾಗಿರುತ್ತದೆ.

ಮುಂದುವರೆದು, ಸೋಲಾರ್ ವಿದ್ಯುತ್ ಘಟಕಗಳಿಗೆ ಸಂಬಂಧಿಸಿದ ಉಪಕರಣಗಳ ಮೇಲಿನ ಜಿ.ಎಸ್.ಟಿ ದರಗಳು ಶೇ.5 ರಿಂದ ಶೇ.12 ಕ್ಕೆ ಪರಿಷ್ಕರಣೆಯಾದ ಕಾರಣ, ಹೆಚ್ಚುವರಿ ತೆರಿಗೆ ಮೊತ್ತವನ್ನು ಸೇರಿಸಿ ಬಿಲ್ಲನ್ನು ಪಾವತಿಸುವ ನಿಟ್ಟಿನಲ್ಲಿ ದಿನಾಂಕ:01.10.2021 ರಿಂದ ಪೂರ್ವಾನ್ವಯವಾಗುವಂತೆ Grid Interactive Hybrid Solar Roof Top Power plants ಗಳ ಅಳವಡಿಕೆಯ ಬಾಬ್ತು ಸಾಮರ್ಥ್ಯವಾರು ಘಟಕಗಳ ಅಂತಿಮ ದರಗಳನ್ನು ಓದಲಾದ(5) ರ ಆದೇಶದಲ್ಲಿ ಪರಿಷ್ಕರಿಸಲಾಗಿದ್ದು, ಓದಲಾದ(6) ರ ಆದೇಶದಲ್ಲಿ Grid Interactive Hybrid Solar Roof Top Power plants ಗಳ ಅಳವಡಿಕೆಯ ಗುತ್ತಿಗೆಯ ಅವಧಿಯನ್ನು ದಿನಾಂಕ: 22.10.2024 ರವರೆಗೆ ವಿಸ್ತರಿಸಲಾಗಿರುತ್ತದೆ.

ಸೋಲಾರ್ ರೂಫ್ ಟಾಪ್ ಅಳವಡಿಕೆ ಕಾರ್ಯಕ್ರಮದ ಇತ್ತೀಚಿನ ಪ್ರಗತಿ ವರದಿಯನ್ನು ಗಮನಿಸಿದಾಗ, 1150 ಗ್ರಾಮ ಪಂಚಾಯತಿಗಳು, 20 ತಾಲ್ಲೂಕು ಪಂಚಾಯತಿಗಳು ಮತ್ತು 05 ಜಿಲ್ಲಾ ಪಂಚಾಯತಿಗಳಲ್ಲಿ ಮಾತ್ರ ಅಳವಡಿಕೆ ಕಾರ್ಯ ಪೂರ್ಣಗೊಂಡಿರುವುದು ಕಂಡುಬಂದಿರುತ್ತದೆ. ಕಾರ್ಯಾದೇಶಗಳನ್ನು ಸ್ವೀಕರಿಸಿದ ಗುತ್ತಿಗೆದಾರ ಸಂಸ್ಥೆಗಳು ನಿಗದಿತ ಅವಧಿಯಲ್ಲಿ ಅಳವಡಿಕೆ ಪ್ರಕ್ರಿಯೆಗಳನ್ನು ಕೈಗೊಳ್ಳಲು ಮುಂದಾಗದಿರುವ ಬಗ್ಗೆ ಪ್ರಗತಿ ಪರಿಶೀಲನಾ ಸಭೆಯಲ್ಲಿ ಕೆಲವು ಜಿಲ್ಲೆಗಳಿಂದ ದೂರು ಕೇಳಿಬಂದಿದ್ದು, ಇದರಿಂದಾಗಿ ಅನುಷ್ಠಾನದಲ್ಲಿ ಹಿನ್ನಡೆಯಾಗುತ್ತಿದೆ ಎಂಬ ಅಭಿಪ್ರಾಯಗಳು ವ್ಯಕ್ತವಾದ ಹಿನ್ನೆಲೆಯಲ್ಲಿ ಮತ್ತು ಸದರಿ ಕಾರ್ಯಕ್ರಮದ ಯಶಸ್ವಿ ಅನುಷ್ಠಾನದ ಹಿತದೃಷ್ಟಿಯಿಂದ, ಟೆಂಡರ್ ಮುಖೇನ ಆಯ್ಕೆಯಾಗಿರುವ ಐದು ಅರ್ಹ ಗುತ್ತಿಗೆದಾರ ಸಂಸ್ಥೆಗಳ ಪೈಕಿ ಯಾವುದೇ ಸಂಸ್ಥೆಗೆ ಕಾರ್ಯಾದೇಶ ನೀಡಿ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲು ಸರ್ಕಾರವು ತೀರ್ಮಾನಿಸಿದ್ದು,

ಅದಕ್ಕಾಗಿ ಈ ಆದೇಶ:

**ಸರ್ಕಾರದ ಆದೇಶ ಸಂ: ಕೆಪಿಆರ್‌ಸಿ/ಡಿಡಿ4/246/2022**
**ಬೆಂಗಳೂರು, ದಿನಾಂಕ:16.09.2022**

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ, ಟೆಂಡರ್ ಮುಖೇನ ಆಯ್ಕೆಯಾಗಿರುವ ಐದು ಅರ್ಹ ಗುತ್ತಿಗೆದಾರ ಸಂಸ್ಥೆಗಳ ಪೈಕಿ, ಕಾರ್ಯಾದೇಶಗಳನ್ನು ಪಡೆದ ಗುತ್ತಿಗೆದಾರ ಸಂಸ್ಥೆಗಳು ಸೋಲಾರ್ ರೂಫ್ ಅಳವಡಿಕೆಯನ್ನು ಪ್ರಾರಂಭಿಸಲು ವಿಳಂಬ ಮಾಡಿದಲ್ಲಿ ಮತ್ತು ಇತರ ಕಾರಣಗಳಿಂದ ಅಳವಡಿಕೆಗೆ ಮುಂದಾಗದಿದ್ದಲ್ಲಿ, ಸಂಬಂಧಪಟ್ಟ ಗುತ್ತಿಗೆದಾರ ಸಂಸ್ಥೆಗೆ ನೀಡಿರುವ ಕಾರ್ಯಾದೇಶವನ್ನು ರದ್ದುಪಡಿಸಿ, ಟೆಂಡರ್ ಮುಖೇನ ಆಯ್ಕೆಯಾಗಿರುವ ಐದು ಅರ್ಹ ಗುತ್ತಿಗೆದಾರ ಸಂಸ್ಥೆಗಳ ಪೈಕಿ ಯಾವುದೇ ಗುತ್ತಿಗೆದಾರ ಸಂಸ್ಥೆಗೆ ಕಾರ್ಯಾದೇಶವನ್ನು ನೀಡಿ ಸೋಲಾರ್ ರೂಫ್ ಟಾಪ್ ಅಳವಡಿಕೆ ಕಾರ್ಯಕ್ರಮವನ್ನು ನಿಗದಿತ ಕಾಲಮಿತಿಯೊಳಗೆ ಯಶಸ್ವಿಯಾಗಿ ಅನುಷ್ಠಾನಗೊಳಿಸಲು ಕ್ರಮವಹಿಸುವಂತೆ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

B. Naveenkumar 16/09/22
(ನವೀನ್ ಕುಮಾರ್. ಬಿ)
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ, (ಗ್ರಾ.ಪಂ.)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.
16/9/22

**ಇವರಿಗೆ,**

1. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್ ಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಅಗತ್ಯ ಕ್ರಮಕ್ಕಾಗಿ
2. ರಾಜ್ಯದ ಎಲ್ಲಾ ತಾಲ್ಲೂಕು ಪಂಚಾಯತ್ ಗಳ ಕಾರ್ಯನಿರ್ವಾಹಕ ಅಧಿಕಾರಿಗಳು ಹಾಗೂ ಎಲ್ಲಾ ಗ್ರಾಮ ಪಂಚಾಯತ್ ನ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳಿಗೆ ಅಗತ್ಯ ಕ್ರಮಕ್ಕಾಗಿ
3. M/s Powerone Microsystems, Pvt Ltd, Bangalore
4. M/s Nuetech solar systems Pvt Ltd, Bangalore
5. M/s Greensol renewable power Pvt Ltd, Bangalore
6. M/s Sri Savitr solar Pvt Ltd, Hyderabad
7. M/s Inkel Limited, Cochin

ಪ್ರತಿಯನ್ನು ಮಾಹಿತಿಗಾಗಿ:

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬೆಂಗಳೂರು, ಇವರ ಆಪ್ತ ಕಾರ್ಯದರ್ಶಿಗಳಿಗೆ
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು(ಪಂ.ರಾಜ್) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬೆಂಗಳೂರು, ಇವರ ಆಪ್ತ ಕಾರ್ಯದರ್ಶಿಗಳಿಗೆ
3. ಆಯುಕ್ತರು, ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ, ಬೆಂಗಳೂರು, ಇವರ ಆಪ್ತ ಶಾಖೆಗೆ
4. ನಿರ್ದೇಶಕರು(ಆಡಳಿತ-2), ಕರ್ನಾಟಕ ಪಂಚಾಯತ್ ರಾಜ್ ಆಯುಕ್ತಾಲಯ, ಬೆಂಗಳೂರು, ಇವರ ಆಪ್ತ ಶಾಖೆಗೆ